

## ಬೆಲೆ

ಸಲೀಸಾಗಿ ಸಿಕ್ಕ ಪ್ರೀತಿ
ಹಗುರ, ಸದರ.
ಸಿಕ್ಕದೇ ಹೋದದ್ದು
ಅಮರ, ಮಧುರ.

## ನಿರಂತರ

ಆತ್ಮಹತ್ಯೆ ಒಮ್ಮೆ ಮಾತ್ರ
ಅಂತರಾತ್ಮಹತ್ಯೆ ನಿರಂತರ

## ಮನಬದ್ಧತೆ

ಅಂದಂದು ಉಂಡ ವಿವಿಧ ಅನುಭವಗಳಲ್ಲಿ
ಮನಸ್ಸಿಗೆ ಪುಷ್ಟಿ ನೀಡುವುದನ್ನು
ಜೀರ್ಣಿಸಿಕೊಂಡು
ಉಳಿದ ಹಾಳುಮೂಳನ್ನು
ಅಂದಂದೇ ವಿಸರ್ಜಿಸುವುದು
ವಿಹಿತ.
ಇಲ್ಲದಿದ್ದಲ್ಲಿ
ಮನಬದ್ಧತೆ ಖಚಿತ.

## ನಿಬಂಧನೆ

ನಿರಾಶರಾಗಬೇಡಿ, ಹಿರಿಯ ಕವಿಗಳೇ,
ನಿಮಗೂ ಬಂದೇ ಬರುತ್ತೆ
ಪ್ರತಿಷ್ಠಿತ
ಸರ್ಕಾರಿ ಪ್ರಶಸ್ತಿ
ಇಂದಲ್ಲ ನಾಳೆ,
ಎಲ್ಲ 'ನ್ಯಾಯ'ಗಳನ್ನೂ
ಸಲ್ಲಿಸಿದ ಬಳಿಕ.
ಬಂದೇ ಬರಬೇಕು.
ಆದರೆ ಒಂದೇ ನಿಬಂಧನೆ,
ಅಲ್ಲಿಯ ತನಕ
ನೀವು ಜೀವಂತ ಇರಬೇಕು.

## ಹೀಗೊಂದು ಜಿಜ್ಞಾಸೆ

ಚಿರನಿದ್ರೆ ಅಂತಾರಲ್ಲ,
ಆಗಲೂ ನಾನಿದ್ರೆ,
ಕನಸು ಬೀಳುತ್ತಾ?
ಸುಖಸ್ವಪ್ನ ಬಿದ್ರೆ
ಅದೇ ಸ್ವರ್ಗಾನಾ?
ದುಃಸ್ವಪ್ನವಾದ್ರೆ
ಅದೇ ನರಕಾನಾ?
ಯಾರನ್ನು ಕೇಳೋಣ?

## ತಿರುಗುಬಾಣ

'ಇವನ ಕವಿತೆ ಎಗಟು ಸಿಹಿ,
ಅವನದ್ದು ಕಾರ್ಕೋಟಕ ಕಹಿ,
ಮತ್ತಿವನದ್ದೋ ಸಿನಿಕ ಒಗರು,
ಮತ್ತವನದ್ದೋ ಭಾರಿ ಪೊಗರು,
ಇನ್ನೊಬ್ಬನದ್ದು ಇನ್ನೂ ಎಳಸು,
ಮತ್ತೊಬ್ಬನದ್ದು ಸುತ್ತೂಬಳಸು'
'ಅದು ಸರಿ, ಮತ್ತೆ ನಿನ್ನದು?
ಬರೀ ಹೊಟ್ಟೆಉರಿ'.